
ಅಂತೂ ಅವಳಗೀಗ ವೃದ್ಧಾಪ್ಯವೇತನದ ಹಣ ಸಿಗುತ್ತಿದೆ. ಅದರಲ್ಲೇ ನೆಮ್ಮದಿಯಾಗಿದ್ದಾಳೆ.

ಒಂದು ದಿನ ಅವಳು ನನ್ನ ಬಳಿ ಬಂದು, ದೀಪಾವಳಿಗೆ ಒಂದು ರವಿಕೆ ಹೊಲಿದು ಕೊಡಬೇಕು ಎಂದಳು.



ನಾನು ಇಲ್ಲ ಎನ್ನಲಿಲ್ಲ. "ಒಂದಲ್ಲಾ. ಮೂರು ಹೊಲಿದು ಕೊಡುತ್ತೇನೆ. ಬಟ್ಟೆ ಎಲ್ಲಿದೆ?" ಎಂದೆ. ದೀಪಾವಳಿಯಂದು ಹೊಸ ಬಟ್ಟೆ ಹಾಕುವ ಅವಳ ಆಸೆಗೆ ನಾನೇಕೆ ತಣ್ಣೀರೆರಚಲಿ?

"ಬಟ್ಟೆ ಇಲ್ಲ. ನೀವೇ ಕೊಡಬೇಕು. ದುಡ್ಡು ಎಷ್ಟಾಗುತ್ತೆ?" ಎಂದಳು.

"ಆಯ್ತು ಯಾವ ಬಣ್ಣದ್ದು ಆಗಬೇಕು ಅದನ್ನಾದರೂ ಹೇಳು. ದುಡ್ಡೇನೂ ಬೇಡ." ಎಂದೆ.

ಅವಳಿಗೊಂದೆರಡು ರವಿಕೆ ಬಟ್ಟೆ ಹೊಲಿದುಕೊಟ್ಟರೆ ಎಷ್ಟು ಖರ್ಚಾದೀತು? ಅವಳಿಂದ ದುಡ್ಡು ನಿರೀಕ್ಷೆ ಮಾಡುವುದೇ ತಪ್ಪು.

ಎರಡು ಮೂರು ಬಗೆಯ ಬಣ್ಣಗಳನ್ನು ಹೇಳಿದಳು. ಅದು ಸುಮ್ಮನೆ. ಯಾವ ಬಣ್ಣವಾದರೂ ಅವಳ ತಕರಾರೇನೂ ಇಲ್ಲ ಎಂಬುದು ನನಗೆ ಗೊತ್ತು.

"ಹೋಗಲಿ, ಅಳತೆ ಬಟ್ಟೆ ಯಾದರೂ ಕೊಡು. ಕೊನೆಗೆ ವ್ಯತ್ಯಾಸವಾಗಬಾರದಲ್ಲಾ" ಎಂದೆ.

ಅವಳು ಮಾತಾಡಲಿಲ್ಲ. ಸುಮ್ಮನೆ ನಿಂತಿದ್ದಳು.

ಅಳತೆ ಬಟ್ಟೆ ಕೇಳಿದ್ದೂ ತಪ್ಪಾಯಿತು ಎಂದು ಕೊನೆಗೆ ನನಗನಿಸಿತು. ಯಾಕೆಂದರೆ, ತೊಟ್ಟಬಟ್ಟೆ ಬಿಟ್ಟರೆ ಅವಳ ಬಳಿ ಬೇರೆ ಇಲ್ಲ. ಕಣ್ಣಳತೆಯಲ್ಲೇ ಇಂಥವರ ಬಟ್ಟೆ ಹೊಲಿಯುವುದು ನನಗೆ ಹೊಸದೇನೂ ಅಲ್ಲ. ಬಟ್ಟೆ ದುಡ್ಡು ಇಲ್ಲ; ಅಳತೆ ಬಟ್ಟೆ ಬೇಡ; ಬಟ್ಟೆ ಹೊಲಿದ ದುಡ್ಡನ್ನೂ ಕೇಳುವಂತಿಲ್ಲ. ಹಾಗಂತ ಬಟ್ಟೆ ಹೊಲಿಯುವುದು ತಡ ಮಾಡುವಂತಿಲ್ಲ. ದೀಪಾವಳಿಗೆ ಇನ್ನು ಹೆಚ್ಚು ದಿನವಿಲ್ಲ.

ದೀಪಾವಳಿಗೆ ಹೊಸ ಬಟ್ಟೆ ತೊಡುವ ಗಂಗಜ್ಜಿಯ ಆಸೆಗೆ ನನ್ನಿಂದ ಅಡ್ಡಿಯಾಗಬಾರದು, ಬೇರೆಲ್ಲಾ ಬಟ್ಟೆ ಬಿಟ್ಟು ಅದನ್ನೇ ಅಂದು ಕೈಗೆತ್ತಿಕೊಂಡೆ.

ಬಟ್ಟೆ ಹೊಲಿದೂ ಪೂರೈಸಿದೆ. ಎರಡು ದಿನಗಳು ಕಳೆದರೂ ಗಂಗಜ್ಜಿ ಪತ್ತೆ ಇಲ್ಲ. ಹೊಲಿದ ಬಟ್ಟೆ ಅವಳಿಗೆ ತಲುಪಿಸುವುದು ಹೇಗೆ? ಮಾರನೆಯ ದಿನ ನನ್ನ ಅಂಗಡಿಯ ಎದುರಿನ ರಸ್ತೆಯಲ್ಲಿ ಅವಳ ಮಗ ನಾರಾಯಣ ಹೋಗುತ್ತಿರುವುದು ಕಾಣಿಸಿತು. ಅವನು ಯಾವಾಗಲೂ ಆ ರಸ್ತೆಯಲ್ಲಿ